All India Radio: Bangalore

National Bulletin In Kannada

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

08.06.2026 13.10 hrs

<>><><*><><<>

ಮುಖ್ಯಾಂಶಗಳು

- ಕೇಂದ್ರ ಸರ್ಕಾರದ ೧೨ ವರ್ಷಗಳ ಪಯಣದ ಕೇಂದ್ರ ಬಿಂದು ಬಡವರ ಕಲ್ಯಾಣ - ಪ್ರಧಾನಿ ನರೇಂದ್ರ ಮೋದಿ
- ಇಂದೋರ್‌ನಲ್ಲಿ ನಾಳೆಯಿಂದ ಬ್ರಿಕ್ಸ್ ಕೃಷಿ ಸಚಿವರ ಸಭೆ ಆಯೋಜನೆ ; ಸಚಿವ ಶಿವರಾಜ್ ಸಿಂಗ್ ಚೌಹಾಣ್ ಮಾಹಿತಿ
- ಆಕಾಶವಾಣಿಯ ೯೦ ವರ್ಷಗಳ ಯಶಸ್ವಿ ಪಯಣಕ್ಕೆ ಕೇಂದ್ರ ಸಚಿವ ಕಿರಣ್ ರಿಜಿಜು ಶುಭಾಶಯ
- ಫಿಲಿಪೈನ್ಸ್‌ನಲ್ಲಿ ೭.೮ ತೀವ್ರತೆಯ ಪ್ರಬಲ ಭೂಕಂಪ ; ೫ ಮಂದಿ ಸಾವು, ೨೦೦ಕ್ಕೂ ಹೆಚ್ಚು ಜನರಿಗೆ ಗಾಯ
- ಏಕೈಕ ಟೆಸ್ಟ್ ಕ್ರಿಕೆಟ್ ; ಅಫ್ಘಾನಿಸ್ತಾನದ ಮೇಲೆ ಫಾಲೋಆನ್ ಹೇರಿದ ಭಾರತ

<>><><*><><<>

ಕೇಂದ್ರ ಸರ್ಕಾರದ ೧೨ ವರ್ಷಗಳ ಪಯಣದ ಕೇಂದ್ರ ಬಿಂದು, ಬಡವರ ಕಲ್ಯಾಣ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಕಳೆದ ೧೨ ವರ್ಷಗಳಲ್ಲಿ ಬಡವರ ಕಲ್ಯಾಣಕ್ಕಾಗಿ ಕೇಂದ್ರ ಸರ್ಕಾರ ಕೈಗೊಂಡಿರುವ ಕ್ರಮಗಳ ಪಯಣ ಮತ್ತು ಸಾಧನೆಗಳನ್ನು ಸ್ಮರಿಸಿರುವ ಅವರು, ಭಾರತವು ಈ ಅವಧಿಯಲ್ಲಿ ಹಲವು ಐತಿಹಾಸಿಕ ಬದಲಾವಣೆಗಳಿಗೆ ಸಾಕ್ಷಿಯಾಗಿರುವ ಈ ಎಲ್ಲಾ ಪರಿವರ್ತನೆಗಳ ಕೇಂದ್ರಬಿಂದು ಬಡವರು ಮತ್ತು ಶೋಷಿತರ ಕಲ್ಯಾಣವೇ ಆಗಿದೆ ಎಂದು ತಿಳಿಸಿದ್ದಾರೆ. ತಮ್ಮ ಸರ್ಕಾರ ಇಂದಿಗೂ ಅಂತ್ಯೋದಯ ತತ್ವದಿಂದ ಪ್ರೇರಿತವಾಗಿದ್ದು, ದಶಕಗಳಿಂದ ಅಭಿವೃದ್ಧಿಯಿಂದ ವಂಚಿತರಾಗಿದ್ದ ಕಟ್ಟಕಡೆಯ ವ್ಯಕ್ತಿಗೂ ಸರ್ಕಾರದ ಸೌಲಭ್ಯಗಳು ತಲುಪುವಂತೇ ಮಾಡುವುದೇ ಇದರ ಮೂಲ ಉದ್ದೇಶವಾಗಿದೆ ಎಂದಿದ್ದಾರೆ. ಜನ್‌ಧನ್ ಖಾತೆಗಳು, ನೇರ ನಗದು ವರ್ಗಾವಣೆ, ಸ್ವಚ್ಛಭಾರತ್ ಅಭಿಯಾನ, ಜಲಜೀವನ್ ಮಿಷನ್ ಮತ್ತು ಆಯುಷ್ಮಾನ್ ಭಾರತದಂತಹ ಸರ್ಕಾರದ ಪ್ರತಿಯೊಂದು ಉಪಕ್ರಮಗಳು ನಾಗರಿಕರಿಗೆ ಘನತೆ ಮತ್ತು ಸಮಾನ ಅವಕಾಶಗಳನ್ನು ಖಾತರಿಪಡಿಸುವ ಉದ್ದೇಶದಿಂದ ಅನುಷ್ಠಾನಗೊಂಡಿವೆ ಎಂದಿದ್ದಾರೆ.

<>><><*><><<>

ಭಾರತದ ಅಧ್ಯಕ್ಷತೆಯಲ್ಲಿ ನಾಳೆಯಿಂದ ಇದೇ ೧೩ರವರೆಗೆ ಮಧ್ಯಪ್ರದೇಶದ ಇಂದೋರ್‌ನಲ್ಲಿ ಬ್ರಿಕ್ಸ್ ಕೃಷಿ ಕಾರ್ಯಕಾರಿ ಗುಂಪು ಮತ್ತು ಬ್ರಿಕ್ಸ್ ಕೃಷಿ ಸಚಿವರ ಪ್ರಮುಖ ಸಭೆಗಳು ಜರುಗಲಿವೆ. ಈ ಕುರಿತು ಇಂದು ಭೋಪಾಲ್‌ನಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್, ಬ್ರಿಕ್ಸ್ ಇಂದು ಜಾಗತಿಕ ಮಟ್ಟದಲ್ಲಿ ಅತ್ಯಂತ ಶಕ್ತಿಶಾಲಿ ವೇದಿಕೆಯಾಗಿ ಹೊರಹೊಮ್ಮಿದೆ ಎಂದು ತಿಳಿಸಿದರು. ವಿಶ್ವದ ಒಟ್ಟು ಕೃಷಿ ಭೂಮಿಯ ಶೇಕಡಾ ೪೨ ರಷ್ಟು ಭಾಗವನ್ನು ಬ್ರಿಕ್ಸ್ ಒಕ್ಕೂಟದ ದೇಶಗಳೇ ಹೊಂದಿದ್ದು, ಜಾಗತಿಕ ಆಹಾರ ಉತ್ಪಾದನೆಯಲ್ಲಿ ಶೇಕಡಾ ೪೫ ರಷ್ಟು ಪಾಲನ್ನು ಹೊಂದಿವೆ. ಮುಂಬರುವ ಈ ಉನ್ನತ ಮಟ್ಟದ ಸಭೆಯು ಬ್ರಿಕ್ಸ್ ರಾಷ್ಟ್ರಗಳ ನಡುವಿನ ಕೃಷಿ ಸಹಕಾರಕ್ಕೆ ಹೊಸ ದಿಕ್ಕನ್ನು ನೀಡಲಿದೆ ಎಂಬ ಸಚಿವರು ವಿಶ್ವಾಸ ವ್ಯಕ್ತಪಡಿಸಿದರು. ಈ ಮಹತ್ವದ ಸಭೆಯಲ್ಲಿ ಮುಖ್ಯವಾಗಿ ರೈತರ ಆದಾಯ, ಉದ್ಯೋಗ ಸೃಷ್ಟಿ, ಜೀವನೋಪಾಯ, ಕೃಷಿ ಸಾಲ ಸೌಲಭ್ಯ ಮತ್ತು ಮಾರುಕಟ್ಟೆ ಪ್ರವೇಶದ ಕುರಿತು ಸುದೀರ್ಘ ಚರ್ಚೆಗಳು ನಡೆಯಲಿವೆ.

<>><><*><><<>

ಆಕಾಶವಾಣಿ ಇಂದು ತನ್ನ ೯೦ ವರ್ಷಗಳನ್ನು ಆಚರಿಸುತ್ತಿದೆ. ಜೂನ್ ೮, ೧೯೩೬ ಈ ದಿನದಂದು, ಭಾರತೀಯ ರಾಜ್ಯ ಪ್ರಸಾರ ಸೇವೆಯನ್ನು ಆಲ್ ಇಂಡಿಯಾ ರೇಡಿಯೋ-ಎಐಆರ್ ಎಂದು ಮರುನಾಮಕರಣ ಮಾಡಲಾಯಿತು. ಈ ದಿನವು ದೇಶದ ಸಾಂಸ್ಕೃತಿಕ, ಮಾಹಿತಿ ಮತ್ತು ಪ್ರಸಾರ ಇತಿಹಾಸದಲ್ಲಿ ಒಂದು ವಿಶೇಷ ಕ್ಷಣವನ್ನು ಗುರುತಿಸುತ್ತದೆ. ಸ್ವಾತಂತ್ರ್ಯದ ನಂತರ, ಈ ಪ್ರಸಾರ ಸೇವೆಯು ವೇಗವಾಗಿ ವಿಸ್ತರಿಸುತ್ತಾ, ೧೯೫೬ರಲ್ಲಿ ಆಕಾಶವಾಣಿ ಎಂಬ ಹೆಸರನ್ನು ಪಡೆದುಕೊಂಡಿತು. ಇಂದು, ಆಕಾಶವಾಣಿ ೫೯೧ ಕೇಂದ್ರಗಳನ್ನು ನಿರ್ವಹಿಸುತ್ತಿದೆ, ಭಾರತದ ಜನಸಂಖ್ಯೆಯ ೯೮ ಪ್ರತಿಶತವನ್ನು ತಲುಪುತ್ತಿದೆ ಹಾಗು ೨೩ ಭಾಷೆಗಳು ಮತ್ತು ೧೪೬ ಉಪಭಾಷೆಗಳಲ್ಲಿ ಪ್ರಸಾರ ಮಾಡುತ್ತಿದೆ. ಆಕಾಶವಾಣಿಯ ಬಾಹ್ಯ ಸೇವೆಗಳ ವಿಭಾಗವು ೧೦೦ಕ್ಕೂ ಹೆಚ್ಚು ದೇಶಗಳಿಗೆ ಪ್ರಸಾರ ಮಾಡುತ್ತಿದೆ. ಬಹುಜನ ಹಿತಾಯ, ಬಹುಜನ ಸುಖಾಯ ಎಂಬ ಆದರ್ಶಗಳನ್ನು ಪಾಲಿಸುತ್ತಾ, ಆಕಾಶವಾಣಿಯ ಸುದ್ದಿ ಸೇವಾ ವಿಭಾಗ, ಈ ವಿಶಾಲ ದೇಶದ ಪ್ರತಿಯೊಬ್ಬ ನಿವಾಸಿಗೂ ವಿವಿಧ ಭೂಪ್ರದೇಶಗಳಲ್ಲಿ, ದಿನದ ೨೪ ಗಂಟೆಯೂ ಎಲ್ಲಾ ಪ್ರಮುಖ ಭಾಷೆಗಳು ಮತ್ತು ಉಪಭಾಷೆಗಳಲ್ಲಿ ಸುದ್ದಿ ಮತ್ತು ಕಾರ್ಯಕ್ರಮಗಳನ್ನು ಒದಗಿಸಲು ಶ್ರಮಿಸುತ್ತಿದೆ. ಈ ಕುರಿತು ವಿಡಿಯೋ ಸಂದೇಶದ ಮೂಲಕ ಶ್ಲಾಘನೆ ವ್ಯಕ್ತಪಡಿಸಿರುವ ಕೇಂದ್ರ ಅಲ್ಪ ಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಇಂದು ಇಡೀ ದೇಶ ಆಕಾಶವಾಣಿಯೊಂದಿಗೆ ಅವಿನಾಭಾವ ಸಂಬಂಧ ಹೊಂದಿದೆ. ದೇಶದ ಮೂಲೆ ಮೂಲೆಗೆ ತಲುಪುತ್ತಿರುವ ಆಕಾಶವಾಣಿಯ ಕಾರ್ಯಕ್ರಮಗಳ ಮೂಲಕ ಏಕ್ ಭಾರತ್ ಶ್ರೇಷ್ಠ್ ಭಾರತ್ ಪರಿಕಲ್ಪನೆ ದೇಶಾದ್ಯಂತ ಮತ್ತಷ್ಟು ಬಲಗೊಳ್ಳುತ್ತಿದೆ ಎಂದಿದ್ದಾರೆ.

ಧ್ವನಿ: : ಕಿರಣ್ ರಿಜಿಜು

<>><><*><><<>

ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ೪ ಕೋಟಿಗೂ ಹೆಚ್ಚು ಮನೆಗಳನ್ನು ನಿರ್ಮಿಸಿದ್ದು, ಶೌಚಾಲಯ, ಎಲ್‌ಪಿಜಿ ಮತ್ತು ನಲ್ಲಿನೀರು ಸಂಪರ್ಕಗಳಂತಹ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ ಎಂದು ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಮನೋಹರ್ ಲಾಲ್ ಹೇಳಿದ್ದಾರೆ. ಇದು ದೇಶದ ವಸತಿ ಕ್ಷೇತ್ರದ ಅಭೂತಪೂರ್ವ ಪರಿವರ್ತನೆ ಎಂದು ತಮ್ಮ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಬಣ್ಣಿಸಿದ್ದಾರೆ. ಇದು ಲಕ್ಷಾಂತರ ಕುಟುಂಬಗಳ ಜೀವನದಲ್ಲಿ ಭದ್ರತೆ ಮತ್ತು ಹೊಸ ಭರವಸೆ ನೀಡಲು ಸಹಾಯ ಮಾಡಿದ್ದು, ಕಳೆದ ೧೨ ವ?ಗಳಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ದೇಶದ ಸಮಗ್ರ ಅಭಿವೃದ್ಧಿ ಹೊಸ ವೇಗವನ್ನು ಪಡೆದುಕೊಂಡಿದೆ ಎಂದು ತಿಳಿಸಿದ್ದಾರೆ. ಹಾಗೂ ಗರೀಬ್ ಕಲ್ಯಾಣ್ ಮಾದರಿಯನ್ನು ಜಗತ್ತಿಗೆ ಸ್ಪೂರ್ತಿದಾಯಕ ಉದಾಹರಣೆಯನ್ನಾಗಿ ಮಾಡಿದೆ ಎಂದು ಕೇಂದ್ರ ಸಚಿವರು ಹೇಳಿದ್ದಾರೆ.

<>><><*><><<>

ದಕ್ಷಿಣ ಫಿಲಿಪ್ಪೈನ್ಸ್‌ನ ಕರಾವಳಿ ಪ್ರದೇಶದಲ್ಲಿ ಇಂದು ಬೆಳಗ್ಗೆ ಸಂಭವಿಸಿದ ೭.೮ ತೀವ್ರತೆಯ ಪ್ರಬಲ ಭೂಕಂಪಕ್ಕೆ ಕನಿಷ್ಠ ೫ ಮಂದಿ ಮೃತಪಟ್ಟಿದ್ದಾರೆ. ಭೂಕಂಪದಿಂದಾಗಿ ಸುನಾಮಿ ಅಲೆಗಳು ಏಳಲು ಕಾರಣವಾಗಿದ್ದು, ಈ ನೈಸರ್ಗಿಕ ವಿಕೋಪದಲ್ಲಿ ೨೦೦ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಪ್ರಾಣಹಾನಿ ಮತ್ತು ಆಸ್ತಿಪಾಸ್ತಿ ನಷ್ಟದ ಸಂಪೂರ್ಣ ವಿವರಗಳನ್ನು ಸ್ಥಳೀಯ ಅಧಿಕಾರಿಗಳು ಇನ್ನು ಕೂಡ ಪರಿಶೀಲಿಸುತ್ತಿದ್ದಾರೆ.

ಫಿಲಿಪ್ಪೈನ್ಸ್‌ನ ಜ್ವಾಲಾಮುಖಿ ಮತ್ತು ಭೂಕಂಪಶಾಸ್ತ್ರ ಸಂಸ್ಥೆಯ ಪ್ರಕಾರ, ಈ ಭೂಕಂಪವು ಬೆಳಿಗ್ಗೆ ೩೩ ಕಿಲೋಮೀಟರ್ ಆಳದಲ್ಲಿ ಸಂಭವಿಸಿದ್ದು, ಇದರ ಕೇಂದ್ರಬಿಂದು ಸುಮಾರು ೭ ಲಕ್ಷ ಜನಸಂಖ್ಯೆ ಹೊಂದಿರುವ ಜನರಲ್ ಸ್ಯಾಂಟೋಸ್ ನಗರಕ್ಕೆ ಹತ್ತಿರದಲ್ಲಿದೆ. ನೆರೆಯ ದೇಶವಾದ ಇಂಡೋನೇಷ್ಯಾದ ಉತ್ತರ ಸುಲಾವೆಸಿ ಮತ್ತು ಉತ್ತರ ಮಲುಕು ಪ್ರಾಂತ್ಯಗಳಲ್ಲೂ ಜನರಿಗೆ ಕಂಪನದ ಅನುಭವವಾಗಿದೆ. ಪೆಸಿಫಿಕ್ ಮಹಾಸಾಗರದ ಸುತ್ತಲಿನ ಭೂಕಂಪನ ದೋಷಗಳ ಜಾಲವಾಗಿರುವ 'ರಿಂಗ್ ಆಫ್ ಫೈರ್' ವಲಯದಲ್ಲಿ ಫಿಲಿಪ್ಪೈನ್ಸ್ ನೆಲೆಗೊಂಡಿರುವುದರಿಂದ, ಇದು ವಿಶ್ವದಲ್ಲೇ ಅತಿ ಹೆಚ್ಚು ಭೂಕಂಪ ಮತ್ತು ಜ್ವಾಲಾಮುಖಿ ಸ್ಫೋಟಗಳಿಗೆ ಒಳಗಾಗುವ ಅಪಾಯಕಾರಿ ದೇಶಗಳಲ್ಲಿ ಒಂದಾಗಿದೆ.

<>><><*><><<>

ರಾಂಚಿಯ ಬಡಗಾಯಿ ಪ್ರದೇಶದಲ್ಲಿರುವ ೮.೮೬ ಎಕರೆ ಭೂಮಿಗೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ, ತಮ್ಮನ್ನು ದೋಷಮುಕ್ತಗೊಳಿಸಬೇಕೆಂದು ಕೋರಿ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಸಲ್ಲಿಸಿದ್ದ ಅರ್ಜಿಯನ್ನು ವಿಶೇಷ ಪಿಎಂಎಲ್ಎ ನ್ಯಾಯಾಲಯವು ವಜಾಗೊಳಿಸಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಉಭಯ ಪಕ್ಷಗಳ ವಾದ-ಪ್ರತಿವಾದಗಳನ್ನು ಆಲಿಸಿದ್ದ ನ್ಯಾಯಾಲಯವು ಈ ಹಿಂದೆ ತನ್ನ ತೀರ್ಪನ್ನು ಕಾಯ್ದಿರಿಸಿತ್ತು. ಇಂದು ತನ್ನ ತೀರ್ಪು ಪ್ರಕಟಿಸಿರುವ ವಿಶೇಷ ನ್ಯಾಯಾಲಯವು, ಪ್ರಕರಣದ ವಿಚಾರಣೆಯನ್ನು ಮುಂದುವರಿಸಲು ದಾಖಲೆಗಳಲ್ಲಿ ಸಾಕಷ್ಟು ಆಧಾರಗಳು ಮತ್ತು ಪೂರಕ ವಸ್ತುಗಳು ಲಭ್ಯ ಇವೆ ಎಂದು ಸ್ಪಷ್ಟಪಡಿಸಿದೆ. ಈ ಹಂತದಲ್ಲಿ ಆರೋಪಿಯನ್ನು ಪ್ರಕರಣದಿಂದ ಮುಕ್ತಗೊಳಿಸಲು ಸಾಧ್ಯವಿಲ್ಲ ಎಂದು ತಿಳಿಸಿರುವ ನ್ಯಾಯಾಲಯವು ಸೊರೇನ್ ಅವರ ಅರ್ಜಿಯನ್ನು ತಿರಸ್ಕರಿಸಿದೆ.

<>><><*><><<>

ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು ಗ್ರಾಹಕರ ಕೆವೈಸಿ ಪ್ರಕ್ರಿಯೆಯನ್ನು ಅಮಾನತುಗೊಳಿಸಿರುವ ಕುರಿತು ಮತ್ತು ಮುಂದಿನ ೨೪ ಗಂಟೆಗಳಲ್ಲಿ ಸಿಮ್ ಕಾರ್ಡ್ ಬ್ಲಾಕ್ ಆಗಲಿದೆ ಎಂದು ಬಿಎಸ್ಎನ್ಎಲ್ ಹೆಸರಿನಲ್ಲಿ ಹರಿದಾಡುತ್ತಿರುವ ಸಂದೇಶವನ್ನು ಕೇಂದ್ರ ಸರ್ಕಾರವು ನಿರಾಕರಿಸಿದೆ. ಈ ಕುರಿತು ಪಿಐಬಿಯ, ಸತ್ಯಶೋಧನಾ ಘಟಕ ಎಚ್ಚರಿಕೆ ನೀಡಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಈ ಮಾಹಿತಿ ಸಂಪೂರ್ಣ ಸುಳ್ಳು ಮತ್ತು ನಕಲಿ ಎಂದು ಸ್ಪಷ್ಟಪಡಿಸಿದೆ.

<>><><*><><<>

ನವ ಚಂಡಿಗಢದ ಮುಲ್ಲಾನ್‌ಪುರದಲ್ಲಿ ನಡೆಯುತ್ತಿರುವ ಭಾರತ-ಅಫ್ಘಾನಿಸ್ತಾನ್ ನಡುವಿನ ಏಕೈಕ ಟೆಸ್ಟ್ ಪಂದ್ಯದ ಮೂರನೇ ದಿನವಾದ ಇಂದು ತನ್ನ ಮೊದಲನೇ ಇನ್ನಿಂಗ್ಸ್‌ನಲ್ಲಿ ಅಫ್ಘಾನಿಸ್ತಾನ್ ತಂಡ ೧೫೨ ರನ್ ಗಳಿಸಿ ತನ್ನೆಲ್ಲ ವಿಕೆಟ್ ಕಳೆದುಕೊಂಡಿತು. ಇನ್ನೂ ೪೦೦ಕ್ಕಿಂತಲೂ ಹೆಚ್ಚಿನ ರನ್‌ಗಳ ಹಿನ್ನೆಡೆಯಲ್ಲಿದ್ದ ಹಿನ್ನೆಲೆ ಅಫ್ಘಾನಿಸ್ತಾನದ ತಂಡದ ಮೇಲೆ ಫಾಲೋಆನ್ ಹೇರಲಾಯಿತು. ತನ್ನ ೨ನೇ ಇನ್ನಿಂಗ್ಸ್ ಆರಂಭಿಸಿರುವ ಅಫ್ಘಾನಿಸ್ತಾನ ಇತ್ತೀಚಿನ ವರದಿ ಬಂದಾಗ ೧ ವಿಕೆಟ್ ನಷ್ಟಕ್ಕೆ ೫೬ ರನ್ ಗಳಿಸಿ ಆಡುತ್ತಿದೆ. ಇದಕ್ಕೂ ಮುನ್ನ ಮೊದಲಿಗೆ ಬ್ಯಾಟಿಂಗ್ ಮಾಡಿದ ಭಾರತ ೮ ವಿಕೆಟ್ ನಷ್ಟಕ್ಕೆ ೫೬೪ ರನ್ ಗಳಿಸಿ ಡಿಕ್ಲೇರ್ ಘೋಷಿಸಿತ್ತು.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>

<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ ><><<>